751(1054) ಶ್ರೀ ಜೀವರಾಜ್.ಡಿ.ಎನ್(ಶೃಂಗೇರಿ) : ಮಾನ್ಯ ಪ್ರವಾಸೋದ್ಯಮ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಚಿಕ್ಕಮಗಳೂರು ಜಿಲ್ಲೆಯ ವಿವಿಧ ಯಾತ್ರಾ ಸ್ಥಳಗಳಾದ ಶೃಂಗೇರಿ, ಹೊರನಾಡು, ರಂಭಾಪುರಿ ಪೀಠ, ದತ್ತಾತ್ರೇಯ ಪೀಠ ಮುಂತಾದ ಕಡೆ ಪ್ರವಾಸಿಗರನ್ನು ಆಕರ್ಷಿಸಲು ಹಾಗೂ ಸವಲತ್ತು ನೀಡಲು ಇಲಾಖಾ ವತಿಯಿಂದ ತೆಗೆದುಕೊಂಡ ಕ್ರಮಗಳೇನು;

ಆ) ಇದುವರೆಗೆ ಕ್ರಮ ಕೈಗೊಳ್ಳದಿದ್ದಲ್ಲಿ ಮುಂದೆ ಏನಾದರೂ ಪ್ರವಾಸಿಗರಿಗೆ ಸವಲತ್ತು ಒದಗಿಸಲು ಕ್ರಮ ಕೈಗೊಳ್ಳಲಾಗುವುದೇ ;

ಇ) ಚಿಕ್ಕಮಗಳೂರು ಜಿಲ್ಲೆಯಲ್ಲಿ ಇಲಾಖೆಯಿಂದ ಗುರುತಿಸಲ್ಪಟ್ಟ ಪ್ರವಾಸಿ ತಾಣಗಳು ಯಾವುವು (ತಾಲ್ಲೂಕು ವಾರು ವಿವರ ನೀಡುವುದು) ;

ಶ್ರೀ ಡಿ.ಟಿ.ಜಯಕುಮಾರ್ (ಪ್ರವಾಸೋದ್ಯಮ ಸಚಿವರು) :

1) ಶೃಂಗೇರಿಯಲ್ಲಿ ಪ್ರವಾಸಿಗರ ಅನುಕೂಲಕ್ಕಾಗಿ ಯಾತ್ರಿನಿವಾಸ ಶೌಚಾಲಯ ಮತ್ತು ಉಪಹಾರ ಗೃಹವನ್ನು ನಿರ್ಮಿಸಲಾಗಿದೆ.

2) ಹೊರನಾಡು ಕ್ಷೇತ್ರದಲ್ಲಿ ಶೌಚಾಲಯ ಮತ್ತು ಕುಡಿಯುವ ನೀರಿನ ಸೌಲಭ್ಯವನ್ನು ನಿರ್ಮಿಸಲಾಗಿದೆ.

3) ದತ್ತಾತ್ರೆಯ ಪೀಠದಲ್ಲಿ ಶೌಚಾಲಯ ಸೌಲಭ್ಯವನ್ನು ನಿರ್ಮಿಸಲಾಗಿದೆ.

4) ಶೃಂಗೇರಿ, ಹೊರನಾಡು, ರಂಭಾಪುರಿ ಪೀಠ ಮತ್ತು ದತ್ತಾತ್ರೇಯ ಪೀಠಗಳ ಬಗ್ಗೆ ಪ್ರವಾಸಿ ಮಾಹಿತಿ ಮಡಿಕೆಗಳಲ್ಲಿ ಮಾಹಿತಿ ನೀಡಲಾಗಿದೆ.

ಆ) ಚಿಕ್ಕಮಗಳೂರು ವೈಲ್ಡರ್‌ನೆಸ್ ಭದ್ರಾ ಯೋಜನೆಗೆ ರೂ.517.88 ಲಕ್ಷಗಳ ಅಂದಾಜು ವೆಚ್ಚಕ್ಕೆ ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿತ್ತು, 202.48 ಲಕ್ಷರೂಗಳಿಗೆ ಮಂಜೂರಾತಿ ನೀಡಿ ಮೊದಲನೇ ಕಂತಿನ ಮೊತ್ತವಾಗಿ 161.98 ಲಕ್ಷ ರೂಗಳನ್ನು ಬಿಡುಗಡೆ ಮಾಡಿರುತ್ತಾರೆ.

ಇ)	ತಾಲ್ಲೂಕು ಹೆಸರು	ಗುರುತಿಸಲ್ಪಟ್ಟ ಪ್ರವಾಸಿ ತಾಣಗಳು
1	ಚಿಕ್ಕಮಗಳೂರು	ಮುಳ್ಳಯ್ಯನಗಿರಿ, ಬಾಬಾಬುಡನಗಿರಿ ಹಿರೇಮಗಳೂರು, ಮತ್ತೋಡಿ ಅಭಯಾರಣ್ಯ ಬೆಳವಾಡಿ.
2	ತರೀಕೆರೆ	ಕೆಮ್ಮಣ್ಣುಗುಂಡಿ, ಅಮೃತಾಪುರ, ಭದ್ರಾ ಪ್ರಜೆಕ್ಟ್
3	ಮೂಡಿಗೆರೆ	ಕಳಸ, ಹೊರನಾಡು, ಕುದುರೆಮುಖ, ಅಂಗಡಿ
4	ಶೃಂಗೇರಿ	ಶೃಂಗೇರಿ, ಕಿಗ್ಗ
5	ಕಡೂರು	ಐಯ್ಯನಕೆರೆ
6	ಕೊಪ್ಪ	ಹಿರೇಕೊಡಗಿ